# ಆಧುನಿಕ ಕನ್ನಡ ಕವಿಗಳು

ಸಂಪುಟ – ೧

- ಮಧುರಚೆನ್ನ
- ಜಿ.ಪಿ.ರಾಜರತ್ನಂ
- ವಿ.ಕೃ.ಗೋಕಾಕ್
- ಎಂ.ವಿ.ಸೀತಾರಾಮಯ್ಯ
- ಎಸ್.ವಿ.ಪರಮೇಶ್ವರ ಭಟ್ಟ
- ಎಂ.ಗೋಪಾಲಕೃಷ್ಣ ಅಡಿಗ
- ಸಿದ್ಧಯ್ಯ ಪುರಾಣಿಕ
- ಸು.ರಂ.ಎಕ್ಕುಂಡಿ
- ಜಿ.ಎಸ್.ಶಿವರುದ್ರಪ್ಪ
- ಚೆನ್ನವೀರ ಕಣವಿ

: ಬಿ.ಎಸ್. ತಲ್ವಾಡಿ :

# ಅರಿಕೆ

'ಆಧುನಿಕ ಕನ್ನಡ ಕವಿಗಳ' ಜೀವನ ಚಿತ್ರಣವನ್ನು ಬರೆಯಬೇಕೆಂಬ ಬಯಕೆ ನನ್ನೊಳಗೆ ಬಹುಕಾಲದಿಂದ ಗೂಡು ಕಟ್ಟಿತ್ತು. ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಕನ್ನಡ ಕವಿಗಳ ಕಾವ್ಯಸ್ವಾದವನ್ನು ಹೀರಿ ಮೈದುಂಬಿಕೊಂಡು ಬೆಳೆದ ನಾನು, ಕಾಲೇಜಿಗೆ ಬಂದಾಗ ಒಟ್ಟಾರೆ ಕನ್ನಡ ಕಾವ್ಯ ವಿಮರ್ಶೆಯನ್ನು ಓದಿ ಆನಂದಿಸಿದ್ದೆನು. ಆದರೆ ನನ್ನೊಳಗೆ ಮೈದುಂಬಿ ಕೊಂಡಿದ್ದ ಆನಂದ ಅದೇಕೊ ಅಪೂರ್ಣವೆನ್ನಿಸಿತು. ಕವಿಗಳ ಜೀವನ ಚಿತ್ರಣ ವನ್ನು ಅವರು ಬದುಕಿ ಬಾಳಿದ ಬಗೆಯನ್ನು ಕಂಡುಕೊಂಡ ಹೊರತು, ಈ ಆನಂದ ಪರಿಪೂರ್ಣವಲ್ಲ ಎಂಬ ಅರಿವೂ ಉಂಟಾಯಿತು. ಸ್ನಾತಕೋತ್ತರ ಪದವಿಗಾಗಿ ಇಂಗ್ಲಿಷ್ ಸಾಹಿತ್ಯಾಧ್ಯಯನವನ್ನು ಮಾಡುತ್ತಿರುವ ಸಂದರ್ಭದಲ್ಲಿ ಇಂಗ್ಲಿಷ್ ಕವಿಗಳ ಜೀವನ ಚರಿತ್ರೆಯನ್ನು ಓದಿದಂತೆಲ್ಲ ಕನ್ನಡ ಕವಿಗಳ ಜೀವನ ಚರಿತ್ರೆ ಕನ್ನಡ ಸಾಹಿತ್ಯದಲ್ಲಿ ದೊರೆಯದೆ ಇದ್ದದೊಂದು ಕೊರತೆ ಎನ್ನಿಸಿತು. ಆ ಕೊರತೆಯನ್ನು ತುಂಬುವ ಹೇರಾಸೆ ನನ್ನೊಳಗೆ ಅಂದಿನಿಂದಲೂ ಮನೆ ಮಾಡಿಕೊಂಡು ಬಂದಿತ್ತು. ದೊಡ್ಡ ಪ್ರಮಾಣದಲ್ಲಿ ಪ್ರತಿಯೊಬ್ಬ ಕವಿಯ ಜೀವನ ಚರಿತ್ರೆಯನ್ನು ಬರೆಯುವ ಶಕ್ತಿಯಾಗಲಿ, ಪ್ರತಿಭೆಯಾಗಲಿ, ಪರಿಶ್ರಮ ವಾಗಲಿ ನನ್ನಲ್ಲಿಲ್ಲ ಎಂದು ತಿಳಿದುಕೊಂಡ ನಾನು ಸಾಧ್ಯವಾದಷ್ಟು ಪ್ರಯತ್ನ ಪರಿಶ್ರಮಗಳಿಂದ ಆದಷ್ಟು ಹೆಚ್ಚು ಜನ ಆಧುನಿಕ ಕವಿಗಳ ಜೀವನವನ್ನು ಸ್ವಲ್ಪದರಲ್ಲಿ ಚಿತ್ರಿಸುವ ಪ್ರಯತ್ನ ಮಾಡಿದೆ. ಈ ಪ್ರಯತ್ನದ ಫಲವೇ ನನ್ನ ಆಧುನಿಕ ಕನ್ನಡ ಕವಿಗಳ ಸಂಪುಟಗಳು.

ಈಗಾಗಲೇ 1986ರಲ್ಲಿ ನನ್ನ ಆಧುನಿಕ ಕನ್ನಡ ಕವಿಗಳ ಮೊದಲನೆಯ ಸಂಪುಟ ಪ್ರಕಟವಾಯಿತು. ಪ್ರಕಟವಾದ ಮೂರೇ ತಿಂಗಳಲ್ಲಿ ಒಂದು ಸಾವಿರ ಪ್ರತಿಗಳು ಮುಗಿದು ಅದಕ್ಕೆ ಬಹಳಷ್ಟು ಬೇಡಿಕೆಯು ಬರುತ್ತಲೇ ಇದೆ. ಜೊತೆಗೆ ನನ್ನ ಎರಡನೆಯ ಸಂಪುಟ ಯಾವಾಗ ಬರುತ್ತದೆಂದೂ, ಅದನ್ನು ಆದಷ್ಟು ಬೇಗನೆ ಹೊರತರಬೇಕೆಂದು ಕನ್ನಡ ಸಾಹಿತ್ಯಾರಾಧಕರು ವಿಶೇಷವಾಗಿ ಕನ್ನಡದ ವಿದ್ಯಾರ್ಥಿ, ಅಧ್ಯಾಪಕರುಗಳು ನನ್ನನ್ನು ಒತ್ತಾಯಿಸುತ್ತಲೇ ಬಂದಿದ್ದರು. ನಾಲ್ಕು ವರ್ಷಗಳ ನಂತರ ನನ್ನ ಆಧುನಿಕ ಕನ್ನಡ ಕವಿಗಳ

ಎರಡನೆಯ ಸಂಪುಟ ಇದೀಗ ಹೊರಬಂದಿದೆ. ಕನ್ನಡ ಬಂಧುಗಳು ಮೊದಲನೆಯ ಸಂಪುಟವನ್ನು ಬರಮಾಡಿಕೊಂಡ ರೀತಿಯಲ್ಲೇ ಇದನ್ನು ಬರಮಾಡಿಕೊಂಡು ಈ ನನ್ನ ಪ್ರಯತ್ನವನ್ನು ಪ್ರೋತ್ಸಾಹಿಸುತ್ತಾರೆಂದು ನಂಬಿದ್ದೇನೆ.

ನನ್ನ ಈ ಪ್ರಯತ್ನದ ಬೆನ್ನೆಲುಬಾಗಿ ನನ್ನೆಲ್ಲ ಬರವಣಿಗೆಯ ಸ್ಫೂರ್ತಿಯಾಗಿ ನನ್ನನ್ನು ಕನ್ನಡ ಸಾರಸ್ವತ ಲೋಕದಲ್ಲಿ ನಿಲ್ಲಿಸಿದ ನನ್ನ ಗುರುಗಳಾದ ಸಾಧು, ಸಜ್ಜನ, ಸರಳ ಸ್ವಭಾವದ ಡಾ॥ ಪಿ. ಕೆ. ರಾಜಶೇಖರ ಅವರಿಗೆ ನಾನು ಸದಾ ಋಣಿಯಾಗಿದ್ದೇನೆ.

ಕವಿಗಳ ಜೀವನಕ್ಕೆ ಸಂಬಂಧಿಸಿದ ವಿಷಯಗಳನ್ನು ಒದಗಿಸಿಕೊಟ್ಟ ಇಲ್ಲಿನ ಕವಿಗಳಿಗೆ ತತ್ಸಂಬಂಧ ವಿಷಯಗಳನ್ನು ಒದಗಿಸಿಕೊಟ್ಟ ಮಿತ್ರರಿಗೆ, ವಿಶೇಷವಾಗಿ ನನ್ನ ಸಹೋದ್ಯೋಗಿ ಮಿತ್ರರಾದ ಶ್ರೀ ಕೆ. ಎಸ್. ರಾಮಕೃಷ್ಣ ಹಾಗೂ ಶ್ರೀ ಎಸ್. ವಿ. ರಂಗನಾಥಭಟ್ಟರಿಗೆ, ಇದರ ಕರಡು ಪ್ರತಿ ಮಾಡಿಕೊಟ್ಟ ಸ್ನೇಹಿತರಾದ ಶ್ರೀ ಕಣಂತೂರು ನವೀನಚಂದ್ರ ಅವರಿಗೆ ನಾನು ಅಭಾರಿಯಾಗಿದ್ದೇನೆ.

ಪ್ರಸ್ತುತ ಕೃತಿಯ ಪ್ರಕಟಣೆಗೆ ನನ್ನನ್ನು ಒತ್ತಾಯಿಸುತ್ತ ನನ್ನ ಎಲ್ಲ ಕೆಲಸಗಳಲ್ಲೂ ಆಸ್ತೆಯಿಂದ, ಅಸಕ್ತಿಯಿಂದ, 'ಪ್ರೀತಿಯಿಂದ ಪಾಲ್ಗೊಂಡು ನನ್ನ ಬೆಳವಣಿಗೆಯಲ್ಲಿ ಆನಂದವನ್ನು ಕಂಡುಕೊಳ್ಳುವ ಆತ್ಮೀಯ ಗೆಳೆಯರಾದ ಶ್ರೀ ಪಿ. ಸಿ. ಅಂತೋಣಿಸ್ವಾಮಿ ಅವರನ್ನು ವಿಶೇಷವಾಗಿ ಸ್ಮರಿಸಲೇಬೇಕು. ಶ್ರೀಯುತರು ಇದರ ಪ್ರಕಟಣೆಯ ಹೊರೆ ಹೊತ್ತು ಮುನ್ನಡೆದಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಅಂದವಾಗಿ ಮುದ್ರಿಸಿಕೊಟ್ಟು ಉಪಕಾರ ಮಾಡಿರುವ ಸಪ್ತಗಿರಿ ಮುದ್ರಣದ ಮಾಲೀಕರಿಗೆ, ಕಾರ್ಮಿಕ ಬಂಧುಗಳಿಗೆ ನನ್ನ ನಮನಗಳು.

**14-1-1990** **ಬಿ. ಎಸ್. ತಲ್ವಾಡಿ**

ಸಂಕ್ರಾಂತಿ

# ಪರಿವಿಡಿ


| | | |
|---|---|---|
| 1. | ಮಧುರಚೆನ್ನ | 1 |
| 2. | ಜಿ. ಪಿ. ರಾಜರತ್ನಂ | 12 |
| 3. | ವಿನಾಯಕ | 23 |
| 4. | ಎಂ. ವಿ. ಸೀತಾರಾಮಯ್ಯ | 35 |
| 5. | ಎಸ್. ವಿ. ಪರಮೇಶ್ವರಭಟ್ಟ | 45 |
| 6. | ಎಂ. ಗೋಪಾಲಕೃಷ್ಣ ಅಡಿಗ | 54 |
| 7. | ಸಿದ್ದಯ್ಯ ಪುರಾಣಿಕ | 67 |
| 8. | ಸು. ರಂ. ಎಕ್ಕುಂಡಿ | 76 |
| 9. | ಜಿ. ಎಸ್. ಶಿವರುದ್ರಪ್ಪ | 87 |
| 10. | ಚೆನ್ನವೀರ ಕಣವಿ | 99 |

# ಸಿದ್ದಯ್ಯ ಪುರಾಣಿಕ

"ಓದಿ ಬ್ರಾಹ್ಮಣನಾಗು, ಕಾದಿ ಕ್ಷತ್ರಿಯನಾಗು,
ಶೂದ್ರ ವೈಶ್ಯನೆ ಆಗು ದುಡಿದು ಗಳಿಸಿ,
ಏನಾದರು ಆಗು ನಿನ್ನೊಲವಿನಂತಾಗು
ಏನಾದರು ಸರಿಯೇ ಮೊದಲು ಮಾನವನಾಗು"
(ಮೊದಲು ಮಾನವನಾಗು)

–ಎಂದು ಮಾನವತೆಯನ್ನು ಸಮರ್ಥಿಸಿ 'ಮೊದಲು ಮಾನವರಾಗಿ' ಜಾತಿ ಜಂಜಾಟವನ್ನು ಕಿತ್ತೊಗೆದು ಸಮಾಜದಲ್ಲಿ ಸಕಲರ ಹಿತವೇ ತಮ್ಮ ಶಾಶ್ವತ ಶಾಂತಿಗೆ ಪೂರಕವೆಂಬ ಸತ್ಯವನ್ನು ಎದೆಯಾಳದಲ್ಲಿ ಬಿತ್ತಿ ಬೆಳೆದು ಕನ್ನಡಿಗರ ಮನೆಮಾತಾಗಿರುವ ಕವಿ ಡಾ. ಸಿದ್ದಯ್ಯ ಪುರಾಣಿಕರು ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನ ದ್ಯಾಂಪುರ ಎಂಬ ಕುಗ್ರಾಮದಲ್ಲಿ ದಿನಾಂಕ 18-6-1918ರಂದು ಜನಿಸಿದರು. ತಂದೆ ಕಲ್ಲಿನಾಥ ಶಾಸ್ತ್ರಿಗಳು, ತಾಯಿ ದಾನಮ್ಮನವರು. ಶಾಸ್ತ್ರಿಗಳು ಧನವಂತರಲ್ಲದಿದ್ದರೂ ವಿದ್ಯಾವಂತರಾಗಿದ್ದರು. ಪುರಾಣ ಪ್ರವಚನ ಮಾಡುವುದರಲ್ಲಿ ನಿಸ್ಸೀಮರಾದ ಅವರು ಸ್ವತಃ ಕವಿಗಳೂ ಆಗಿದ್ದರು. ಅವರ ತಂದೆ ಚೆನ್ನ ಕವಿಗಳು ಕಾವ್ಯಕ್ಷೇತ್ರದಲ್ಲಿ ಹೆಸರು ಮಾಡಿದ್ದರು. ಹೀಗೆ ಸಿದ್ದಯ್ಯನವರಿಗೆ ಮನೆಯಲ್ಲಿ ವಿದ್ಯಾಮಂದಿರದ ವಾತಾವರಣ ಪ್ರಾಪ್ತವಾಗಿತ್ತು. ಬಾಲಕ ಸಿದ್ದಯ್ಯನವರನ್ನು ಶಾಸ್ತ್ರಿಗಳು ಮನೆಯಲ್ಲಿದ್ದಾಗಲೆಲ್ಲ ಹತ್ತಿರ ಕುಳ್ಳಿರಿಸಿಕೊಂಡು ಕಾವ್ಯ, ಪುರಾಣ ಪುಣ್ಯಕಥೆ, ವ್ಯಾಕರಣ ಛಂದಸ್ಸು ಮೊದಲಾದ ವಿಷಯಗಳನ್ನು ವಿವರಿಸಿ ಹೇಳುತ್ತಿದ್ದರು. ಅವರ ಸೋದರ ಮಾವ ಕಾಲಕಾಲೇಶ್ವರ ಶಾಸ್ತ್ರಿಗಳೇ ಅವರಿಗೆ ಮೊದಲ ಗುರುವಾದರು. ಅಜ್ಜ ಚೆನ್ನ ವಿಗಳು ನಡೆಸುತ್ತಿದ್ದ ಕಾವ್ಯಶಾಸ್ತ್ರ ವಿನೋದ ಗೋಷ್ಠಿಗಳು ಮೊದಲ ತರಗತಿಗಳಾದುವು. ಮುಂದೆ ಶ್ರೀಯುತರ ಮಾಧ್ಯಮಿಕ ವಿದ್ಯಾಭ್ಯಾಸ ಕುಕ್ಕನೂರಿನ 'ವಿದ್ಯಾಗುರು ಕುಲ'ದಲ್ಲಿ ಸಾಗಿತು. ಅಲ್ಲಿ ಶ್ರೀ

ದೇಸಾಯಿ ಪಾಂಡುರಂಗರಾಯರು ಬಾಲಕ ಸಿದ್ದಯ್ಯನವರ ಶಕ್ತಿ ಸಾಮರ್ಥ್ಯಗಳಿಗೆ ಚಾಲಕಶಕ್ತಿಯಾದರು. ಮಾಧ್ಯಮಿಕ ಶಾಲೆಯ ಸಾರ್ವಜನಿಕ ಪರೀಕ್ಷೆಯಲ್ಲಿ ಅವರು ಪ್ರಥಮ ದರ್ಜೆಯಲ್ಲಿ ಪಾಸಾಗಿ, ಪ್ರೌಢವಿದ್ಯಾಭ್ಯಾಸಕ್ಕಾಗಿ ಗುಲ್ಬರ್ಗ ಸೇರಿದರು. ಆಗಲೇ ಶ್ರೀಯುತರು 'ಕನ್ನಡ ಭಕ್ತ'ರಾಗಿ ಗುರುತಿಸಿಕೊಂಡದ್ದು. ಮೆಟ್ರಿಕ್ ಪರೀಕ್ಷೆ ಬರೆದು ಉಸ್ಮಾನಿಯ ವಿಶ್ವವಿದ್ಯಾನಿಲಯಕ್ಕೆ ಒಟ್ಟಿನಲ್ಲಿ ಮೂರನೆಯವರಾಗಿ, ಇಂಗ್ಲಿಷ್-ಕನ್ನಡಗಳಲ್ಲಿ ಮೊದಲನೆಯವರಾಗಿ ಪಾಸಾದರು. ಗುಲ್ಬರ್ಗದಲ್ಲೇ ಇಂಟರ್ ಮೀಡಿಯಟ್ ಕಲಿಯಲು ತೊಡಗಿದರು. ಈ ಪರೀಕ್ಷೆಯಲ್ಲೂ ಪ್ರಥಮ ಸ್ಥಾನಗಳಿಸಬೇಕೆಂದು ಹಗಲು ರಾತ್ರಿ ಕಷ್ಟಪಟ್ಟು ಓದ ತೊಡಗಿದರು. ಅದೇ ವರ್ಷ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿಯೂ ಅವಿರೋಧವಾಗಿ ಆಯ್ಕೆಗೊಂಡು ಕನ್ನಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಂತೆ ದುರದೃಷ್ಟವಶಾತ್ ಅವರಿಗೆ ಆರೋಗ್ಯ ಕೆಟ್ಟು ಪರೀಕ್ಷೆಯನ್ನೇ ಬರೆಯಲಾಗದೆ ಮಲಗಿಬಿಟ್ಟರು. ವೈದ್ಯರನೇಕರು ಅವರಿಗೆ ಕ್ಷಯರೋಗವಿರಬೇಕೆಂಬ ಶಂಕೆಯನ್ನು ಸೂಚಿಸಿದರು. ಶ್ರೀಯುತರ ಮನನೊಂದು ಮನೆಬಿಟ್ಟು ಮದನಪಲ್ಲಿಗೆ ಬಂದು ಅಲ್ಲಿನ ಪ್ರಖ್ಯಾತ ವೈದ್ಯರಾಗಿದ್ದ ಡಾ. ಬೆಂಜಾಮಿನ್ ಮುಲ್ಲರ್ ಅವರಿಂದ ಚಿಕಿತ್ಸೆ ಪಡೆದು ಮನೆಗೆ ಬಂದರು. ಆ ವೇಳೆಗೆ ಮತ್ತೆ ಕಾಲೇಜಿಗೆ ಸೇರಲು ಕಾಲಮೀರಿದ್ದರಿಂದ ಪರೀಕ್ಷೆ ಕಟ್ಟಿ ಮನೆಯಲ್ಲೇ ಓದ ತೊಡಗಿದರು. ಮನೆಯಲ್ಲಿ ಕಿತ್ತುತಿನ್ನುವ ಬಡತನ. ಈ ಮಧ್ಯೆ ಅವರ ವಿವಾಹದ ವಿಚಾರವೂ ಬಂತು. ಪುರಾಣಿಕರು ಹೇಳದೆ ಕೇಳದೆ ಮನೆಯಿಂದ ಹೊರಟು ರಾತ್ರೀ ರಾತ್ರಿ ಕರ್ನಾಟಕದ ಗಾಂಧಿಯೆನಿಸಿದ್ದ ಹರ್ಡೇಕರ್ ಮಂಜಪ್ಪನವರು ನಡೆಸುತ್ತಿದ್ದ ಆಲಮಟ್ಟಿ ಆಶ್ರಮಕ್ಕೆ ಬಂದು ಓದು ಮುಂದುವರಿಸಿದರು. ಹರ್ಡೇಕರ್ ಅವರ ವಿಚಾರಗಳು ಶ್ರೀಯುತರ ಮೇಲೆ ಬಹಳ ಪ್ರಭಾವ ಬೀರಿದವು. ಅಲ್ಲಿ ಆರು ತಿಂಗಳು ಕಳೆದು, ಊರಿಗೆ ಬಂದು ಮತ್ತೆ ಓದಿಕೊಂಡು ಪರೀಕ್ಷೆ ಬರೆದು ನಿರೀಕ್ಷೆಯಂತೆ ಇಂಟರ್‌ನಲ್ಲಿ ಪ್ರಥಮ ದರ್ಜೆಯಲ್ಲೇ ಉತ್ತೀರ್ಣರಾದರು. ಮುಂದೆ ಹೈದರಾಬಾದಿನಲ್ಲಿ ವಿದ್ಯಾರ್ಥಿ ವೇತನದ ಸಹಾಯದಿಂದ ಪದವಿ ಪರೀಕ್ಷೆಗೆ ಓದಿ ಪ್ರಥಮ ಸ್ಥಾನದಲ್ಲಿ ಪಾಸಾದರು. ಮುಂದೆ ತಂದೆಯವರ ಆಸೆಯಂತೆ ಎಲ್.ಎಲ್.ಬಿ., ಓದಲು ಕಾಲೇಜಿಗೆ ಸೇರಿಕೊಂಡು ಆ ವಿಷಯಗಳು ತಲೆಗೆ ಹೋಗದೆ ಆ ವರ್ಷ



ಪೇಲಾಗಿ ಆ ವಿಷಯವನ್ನೇ ಕೈಬಿಟ್ಟು ಇಂಗ್ಲಿಷ್ ಎಂ.ಎ.ಗೆ ಸೇರಿದರು. 1958ರಲ್ಲಿ ಐ.ಎ.ಎಸ್. ಪದವಿ ಸಂಪಾದಿಸಿದರು. ಇಂಗ್ಲಿಷ್ ತರಗತಿಗಳು ಮಧ್ಯಾಹ್ನದವರೆಗೆ ಮಾತ್ರವಿದ್ದು ಪಾರ್ಟ್ ಟೈಂ ಕೆಲಸಕ್ಕೆ ಅಲೆಯುತ್ತಿದ್ದಾಗ ಅಂದಿನ ಹೈದರಾಬಾದ್ ಸರ್ಕಾರ ತಹಸೀಲ್ದಾರ್ ಹುದ್ದೆಗಳಿಗೆ ಅರ್ಜಿ ಕರೆದಿದ್ದರು. ಗುರುಗಳು ಹಾಗೂ ಸ್ನೇಹಿತರ ಒತ್ತಾಯಕ್ಕೆ ಮಣಿದು ಅರ್ಜಿ ಹಾಕಿದರು. ಮುಂದೆ ಉದ್ಯೋಗವೂ ಲಭಿಸಿತು. ಹೀಗೆ ಸಾರ್ವಜನಿಕ ಸೇವೆಗೆ ದುಮುಕಿದ ಪುರಾಣಿಕರು ಮುಂದೆ ಭೂದಾಖಲೆಗಳ ಉಲ್ಲೇಖನಾ ಅಧಿಕಾರಿಗಳಾಗಿ (1944), ಅಸಿಸ್ಟೆಂಟ್ ಕಮೀಷನರ್ ಆಗಿ (1948), ಡೆಪ್ಯುಟಿ ಕಲೆಕ್ಟರ್ ಆಗಿ (1955), ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾಗಿ(1962), ಜಿಲ್ಲಾಧಿಕಾರಿಗಳಾಗಿ(1965), ಕಾರ್ಮಿಕ ಕಮೀಷನರ್ ಆಗಿ (1972) ವಿವಿಧ ಸರ್ಕಾರಿ ಇಲಾಖೆಗಳಲ್ಲಿ ತಮ್ಮ ಕರ್ತವ್ಯವನ್ನು ಚೆನ್ನಾಗಿ ಮಾಡಿ 1976ರಲ್ಲಿ ಸೇವಾ ಜೀವನದಿಂದ ನಿವೃತ್ತರಾದರು.

ಕಲ್ಬುರ್ಗಿಯಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ "ಕಲ್ಬುರ್ಗಿ ಕರ್ನಾಟಕ ಸಂಘ" ಏರ್ಪಡಿಸಿದ್ದ ಕವನ ಸ್ಪರ್ಧೆಯೊಂದರಲ್ಲಿ ಮೊದಲ ಬಾರಿಗೆ "ಬೆಳಗು" ಎಂಬ ಕವನ ರಚಿಸಿ, ಪ್ರಥಮ ಪಾರಿತೋಷಕ ಪಡೆದರು. ಚೌದಾಪುರಿಯ ಹಿರೇಮಠದ ಸ್ವಾಮಿಗಳ ಆಶೀರ್ವಾದವೂ ಲಭಿಸಿ ಪುರಾಣಿಕರು ಕನ್ನಡ ಕಾವ್ಯಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರು. ಅಂದಿನಿಂದ ಕಾವ್ಯಾಭ್ಯಾಸದ ಜೊತೆಗೆ ಕಾವ್ಯರಚನೆಯ ಗೀಳೂ ಹಿಡಿದು ಬಿಟ್ಟಿತು. 'ಜಯಕರ್ನಾಟಕ' ಮಾಸ ಪತ್ರಿಕೆಯಲ್ಲಿ ಅವರ ಕವನಗಳು ಪ್ರಕಟವಾಗಿ ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿತು. ಮುಂದೆ ಕಾಲೇಜಿನ "ಮಿಂಚು" ಎಂಬ ಕೈಬರಹದ ಮಾಸ ಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡಬೇಕಾಗಿ ಬಂದದ್ದು ಅವರಿಗೊಂದು ವರದಾನವಾಯಿತು. ಪ್ರಾಯಶಃ ಅದೇ ಸಂದರ್ಭದಲ್ಲಿ ಬರೆದ "ಕಾವ್ಯದೇವಿ" ಎಂಬ ಕವನದಲ್ಲಿ ತಮ್ಮ 'ಕಾವ್ಯನಾಮ'ವನ್ನು ತಾವೇ ಕರೆದುಕೊಂಡರು.

ನಿನ್ನಾತ್ಮವಾನಂದ 'ನನ್ನಾತ್ಮ ಕಾವ್ಯ'
ಇಂತು ಕಾವ್ಯಾನಂದ ನಾಮ ಸುಶ್ರಾವ್ಯ.

ಅಂದಿನಿಂದ 'ಕಾವ್ಯಾನಂದ' ಅವರ ಕಾವ್ಯನಾಮವಾಗಿ, ಸಾಹಿತ್ಯಕ್ಷೇತ್ರದಲ್ಲಿ ಅದೇ ಹೆಸರು ಹೆಚ್ಚು ಜನಪ್ರಿಯವಾಗಿ ಉಳಿಯಿತು.

ತಹಸೀಲ್ದಾರ್ ಹುದ್ದೆ ಕೈಹತ್ತಿ ತರಬೇತಿ ಪಡೆಯುತ್ತಿದ್ದ ಸಂದರ್ಭದಲ್ಲಿ ಡಾ. ಸಿದ್ದಯ್ಯ ಪುರಾಣಿಕರಿಗೆ ಶ್ರೀಮತಿ ಗಿರಿಜಮ್ಮನವರೊಡನೆ ವಿವಾಹ ವಾಯಿತು (1943).

ಎಷ್ಟು ಕುಡಿನೋಟಗಳು ಕೆಣಕಿದರು ಕದಲದಿಹ
ನಿಶ್ಚಿಂತ, ಸ್ವತಂತ್ರ, ಶಾಂತಮನವು
ಮೊದಲ ನೋಟಕೆ ಬೇಟೆಯಾಯ್ತು, ಬಯಕೆಯು ಹೆಣ್ಣೆ
ಶಿರುಗಿ ಬಿದ್ದಿತು ನನಗೆ ನನ್ನ ಮನವು ।
(ನಿನ್ನ ನೋಡಿ ಬಂದ ಮೇಲೆ)

"ಹೂವ ಮುಡಿದು ಒಂದು ಹೆಡಿಗೆ
ತತ್ತರಿಸುತಿರಲು ನಡಿಗೆ
ಒನಪು ಸೂಸೆ ಅಡಿಗೆ ಅಡಿಗೆ"

ಹೊರಟು ಬಂದ ಧರ್ಮಪತ್ನಿಯು ಜೊತೆ ಜೇಂಗೊಡದಲ್ಲಿ ಅದ್ದೆದ್ದು.

ಹೂಗಳೊಡನೆಯೆ ಸ್ಪರ್ಧೆ ನಡೆದರೆ
ನೀನೆ ಹೂಗಳ ಜಯಿಸುವಿ !
ಮುನಿಸ ಬಿಡು ಬಾ ತೊಡಿಸು ಕೊರಳಿಗೆ
ಕರಶಿರೀಷದ ಮಾಲೆಯು"

ಎಂದು ತಮ್ಮ ನಲ್ವಾತಿನ ಅಮೃತಸರಸಿಯಲ್ಲಿ ತೇಂಕಾಡಿದರು. ಅವರ ಪ್ರೀತಿಯ ಪ್ರತೀಕವಾಗಿ ವಿಜಯಾ, ಶಿವಗೀತಾ, ಪ್ರಸನ್ನಕುಮಾರ್ ಮತ್ತು ಭಾರತಜ್ಯೋತಿ ಎಂಬ ಮಕ್ಕಳಾದರು.

ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಉದ್ಭವವಾದ ಕಾವ್ಯಾನಂದರ ಕಾವ್ಯಗಂಗೆ ಏಕಪ್ರಕಾರವಾಗಿ ಅನುಸ್ಯೂತವಾಗಿ ಕ್ರಮವಾಗಿ ಹರಿದು ಬಂದಿದೆ. 1953ರಲ್ಲಿ 'ಜಲಪಾತ' ಎಂಬ ಕವನಸಂಕಲನದ ಪ್ರಕಟಣೆಯಿಂದ ಪ್ರಾರಂಭಿಸಿ ಕ್ರಮವಾಗಿ ಕರುಣಾ ಶ್ರಾವಣ (1955), ಮಾನಸ ಸರೋವರ (1959), ಕಲ್ಲೋಲ ಮಾಲೆ (1968), ಮೊದಲು ಮಾನವನಾಗು (1969), ಚರಗ ಎಂಬ ಕವನ ಸಂಗ್ರಹಗಳನ್ನು ಹೊರತಂದರು.



ಈ ಸಂಕಲನಗಳಲ್ಲಿ ನಾನಾ ಮುಖಗಳನ್ನು ಚಿತ್ರಿಸಿರುವ ಕವನಗಳಿವೆ. ಪ್ರಕೃತಿ ವರ್ಣನೆ, ದೇಶಭಕ್ತಿ ಗೀತೆಗಳು, ಸಾಮಾಜಿಕ ಲೋಪದೋಶಗಳನ್ನು ಎತ್ತಿ ಹೇಳುವ ಪದ್ಯಗಳು, ಶೃಂಗಾರ ಕವಿತೆಗಳು ಪ್ರಮುಖವಾಗಿ ಇವೆ. ಕಾವ್ಯವೆಂದರೆ ಬುದ್ಧಿಭಾವಗಳ ವಿದ್ಯುದಾಲಿಂಗನ ಎಂಬುದನ್ನು ಸೂಕ್ಷ್ಮವಾಗಿ ಅರಿತಿರುವ ಈ ಕವಿ–

ಬಗೆಯು ಬಾನಲಿ ಬಣ್ಣವೇಳರ
ಬಿಲ್ಲ ದಿಬ್ಬಣ ಸಾಗಿದೆ
ಎಲ್ಲೊ ಒಂದೆಡೆ ಭಾವ ಬುದ್ಧಿಯು
ಹಸೆಗೆ ನಿಲ್ಲುವ ಹಾಗಿದೆ

ಎಂದು 'ಕವನ ಜನನ'ದ ರಹಸ್ಯವನ್ನೇ ನಾಲ್ಕು ಪಂಕ್ತಿಗಳಲ್ಲಿ ಅಭಿವ್ಯಕ್ತಿಪಡಿಸಿದ್ದಾರೆ. ಹತ್ತು ಪುಟಗಳ ವ್ಯಾಖ್ಯಾನಕ್ಕೆಟುಕದಷ್ಟು ಈ ಎರಡು ಪಂಕ್ತಿಗಳಲ್ಲಿ ಸಾಧಿತವಾಗಿದೆ.

ಪ್ರಕೃತಿಯ ಸೌಂದರ್ಯವನ್ನು ಹೇಳುವ ಪದ್ಯಗಳು ಮನಮೋಹಕವಾಗಿ ಅಭಿವ್ಯಕ್ತಿಗೊಂಡಿರುವ ಕವನಗಳಿವೆ. ಕವಿಯು ಕಲ್ಪನೆಯಲ್ಲಿ ಮಳೆಯನ್ನು ನೋಡಿ :

ಮೋಡಗಳ ಜಡೆ ಬಿಚ್ಚಿ ಮೈದೊಳೆದುಕೊಳುತಿಹಳು
ಬಯಲ ಭಾಮಿನಿ ಜಗದ ಮಣೆಯ ಮೇಲೆ;
ಕೇಶರಾಶಿಯ ನೀರು ತೊಟ್ಟಿಕ್ಕಿ ಸುರಿಯುತಿದೆ,
ಇದಕೆ ಜನವೆನ್ನುವುದು ಮಳೆಯ ಲೀಲೆ !
(ಬಾನನ್ನೀ ತೋಟಕ್ಕೆ : ಕರುಣಾ ಶ್ರಾವಣ; ಪುಟ ೩೪)

ಯಾವಾಗಲೂ ಸಾಹಿತ್ಯಜನನ ಸುಖಸಮೃದ್ಧಿಗಳ ಬೀಡಿನಲ್ಲಿ ನಡೆಯುವುದಿಲ್ಲ. 'ಜೀವನದ ಅಮೃತ ವಿಷಗಳೆರಡರಲ್ಲಿಯೂ ಲೇಖನಿಯನ್ನು ಅದ್ದಿ ಕಾವ್ಯ ಬರೆಯಬಹುದೆಂದು' ಅವರು ತೋರಿಸಿಕೊಟ್ಟಿದ್ದಾರೆ :

ಬೆವರ ಹನಿ ಕಂಬನಿಯು, ನಿಟ್ಟುಸಿರ ಉಗಿಯಿಂದ
ಲೊಗೆವ ಹುಳಿಹನಿಯನ್ನು ಮಸಿಯ ಮಾಡಿ
ನೂರು ನೋವಿನಮುಳ್ಳ ಲೆಕ್ಕಣಿಕೆಯಿಂದಲೇ
ಬರೆಯಬಹುದೊಮ್ಮೊಮ್ಮೆ ಅಳಲ ಹಾಡಿ !

ರೋಮಾಂಚನಗಳ ಕುಂಚ ಯೌವನದ ಚಂಚಲದ
ಮಿಂಚಿನಲ್ಲದ್ದಿ ಮೈಯುಬ್ಬಿ ಕೊಬ್ಬಿ
ಚಿತ್ರಚಿತ್ರಾಕ್ಷರದಿ ಬರೆಯಬಹುದಿನ್ನೊಮ್ಮೆ
ಚೆಲುವೆ ಬರೆಹದ ಬಳ್ಳಿಯಾಗಿ ಹಬ್ಬಿ.
(ಕರುಣಾ ಶ್ರಾವಣ)

"ಕಾವ್ಯಾನಂದರು ತನ್ಮಯತೆಯಿಂದ ಪ್ರಕೃತಿ ಸೌಂದರ್ಯವನ್ನನುಭವಿಸಿ ಆ ಅನುಭವಪಾಕವನ್ನು ಶಾಬ್ದಿಕ ಪ್ರಣಾಳಿಕೆಯಲ್ಲಿ ಹರಿಸುವಂತೆಯೇ, ಸಮಾಜದಲ್ಲಿ ತಾಂಡವವಾಡುತ್ತಿರುವ ಕರಾಳ ನಗ್ನತೆಯ ರೂಕ್ಷ ರೂಪದ ಪ್ರೇತಸ್ವರೂಪದ ವಿನಾಶಾತ್ಮಕವಾದ ಪಿಡುಗುಗಳನ್ನು ವಿವೇಕಾಕ್ಷಿಯ ಸಹಾನುಭೂತಿಯ ದೃಷ್ಟಿಯಿಂದ ನೋಡಿದ್ದಾರೆ. ಸೌಂದರ್ಯ ವರ್ಣನೆಯಲ್ಲಿ ಕುಸುಮ ಕೋಮಲವಾಗಿ ಕಂಡ ಅವರ ಮನಸ್ಸು ಸಾಮಾಜಿಕ ಲೋಪದೋಷಗಳ ಪ್ರಕಟಣೆಯಲ್ಲಿ ವಜ್ರ ಕಠೋರವಾಗುತ್ತದೆ: ಮೊದಲು ಮೃದುಲಲಿತ ಕುಂಚದಂತಿದ್ದ ಲೇಖನಿ ಉಚಿತ ಸ್ಥಾನದಲ್ಲಿ ಭಯಂಕರ ಖಡ್ಗವಾಗುತ್ತದೆ." (ದೇಜಗೌ, ಸಾಹಿತಿಗಳ ಸಂಗಹದಲ್ಲಿ ಪುಟ 146)

ನೀತಿಯ ಗೋರಿಯ ಮೇಲೆ ಬೆಳೆದಿದೆ ನೋಡು–
ಜಾತೀಯತೆಯ ಹೇಸಿಗೆ ಹೂವು,
ದೋಷದ ಹೂವು !

ಮಾನವರೆಲ್ಲಾ ಒಂದೇ ಎನ್ನುವ ಭಾವನೆ ಮೊಳೆದಿಲ್ಲ, ಸಕಲರ ಹಿತವೇ ಶಾಶ್ವತ ಶಾಂತಿಯು ಎಂಬುದೆ ಹೊಳೆದಿಲ್ಲ, ಎಂಬುದಾಗಿ ಕವಿ ಹೃದಯ ನೊಂದು ನುಡಿದಿರುವುದಿದೆ.

'ವಚನೋದ್ಯಾನ' (1977) 525 ವಚನಗಳಿರುವ ಪುರಾಣಿಕರ ಮಹತ್ವದ ಗ್ರಂಥವಾಗಿದೆ. ಶರಣ ಸಾಹಿತ್ಯದ ಬಗ್ಗೆ ಅವರಿಗಿರುವ ಅನುಭವ ಈ ಕೃತಿಯಲ್ಲಿ ಮಡುಗಟ್ಟಿಸಿದ್ದಾರೆ. "ನನಗೆ ತೋರಿದಂತೆ ಬರೆದರೆ ಅದು ವಚನವಯ್ಯ" ಎಂದು ರಚನೆ-ವಚನಗಳ ವ್ಯತ್ಯಾಸವನ್ನು ಗುರುತಿಸಿಕೊಂಡು "ಸ್ವತಂತ್ರ ಧೀರ ಸಿದ್ಧೇಶ್ವರ" ಎಂಬ ಅಂಕಿತದಲ್ಲಿ ಇದನ್ನು ಬರೆದಿದ್ದಾರೆ.



ವಿದ್ಯೆ ಬಂತು, ವಿನಯ ಹೋಯ್ತು
ಬುದ್ಧಿ ಬಂತು, ಶ್ರದ್ಧೆ ಹೋಯ್ತು
................
ಮಾತು ಬಂತು. ಕೃತಿ ಹೋಯ್ತು
ಜಾತಿ ಬಂತು. ಪ್ರೀತಿ ಹೋಯ್ತು
ಸ್ವತಂತ್ರ ಬಂತು, ಸೌಜನ್ಯ ಹೋಯ್ತು
ಸಿದ್ದಯ್ಯ ಪುರಾಣಿಕ ಬಂದ, ಸ್ವತಂತ್ರಧೀರ ಸಿದ್ಧೇಶ್ವರ ಹೋದ.

'ಮರಳ ಸಿದ್ದನ ಕಂತೆ' ಕಾವ್ಯಾನಂದರ ಮತ್ತೊಂದು ನೀತಿ ವಚನಗಳ ಸಂಗ್ರಹ. 'ಮರುಳಸಿದ್ದ' ಇಲ್ಲಿನ ಅಂಕಿತ. ಇದು ಡಿವಿಜಿಯವರ 'ಮಂಕುತಿಮ್ಮನ ಕಗ್ಗ' ಹಾಗೂ ಎಸ್. ವಿ. ರಂಗಣ್ಣನವರ 'ರಂಗಭಿನ್ನಪ' ಕೃತಿಗಳ ಸಾಲಿಗೆ ಸೇರಿದ್ದಾಗಿದೆ. 'ವಚನ ನಂದನ' (1983) ಶ್ರೀಯುತರ ಮತ್ತೊಂದು ವಚನಗ್ರಂಥ.

ಪುರಾಣಿಕರಿಗೆ ಮಕ್ಕಳ ಮೇಲಿನ ಪ್ರೀತಿ ಅಪಾರ. ಮಕ್ಕಳೆಂದರೆ ಬಗ್ಗಿ ಹೋಗುವ ಕಾವ್ಯಾನಂದರು ಮಕ್ಕಳಿಗೆಂದು 'ತುಪ್ಪಾ ರೊಟ್ಟಿಗೇ ಗೇ ಗೇ' (1973), ಗಿಲ್‌ಗಿಲ್‌ಗಿಲಗಚ್ಚಿ (1978), ತಿರುಗಲೆ ತಿರುಗಲೆ ತುರುಗುಯ್ಯಾಲೆ (?) ತುಂಬಾ ಪ್ರಿಯವಾದ ಮಕ್ಕಳ ಸಂಕಲನಗಳು.

ಅಜ್ಜನ ಕೋಲಿದು ನನ್ನಯ ಕುದುರೆ
ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ
ಕಾಲಿಲ್ಲದೆಯೆ ಓಡುವ ಕುದುರೆ
ಕೂಳಿಲ್ಲದೆಯೆ ಬದುಕುವ ಕುದುರೆ

ಕಾವ್ಯಾನಂದರು ಕವಿಗಳಾಗಿರುವಂತೆ ನಾಟಕಕಾರರೂ, ಜೀವನ ಚಿತ್ರಕಾರರೂ, ಸಂಪಾದಕರೂ ಆಗಿದ್ದಾರೆ. ಅವರು ವಿದ್ಯಾರ್ಥಿ ದಿಸೆಯಲ್ಲಿಯೇ ಬರೆದ ನಾಟಕ ಆತ್ಮಾರ್ಪಣೆ (1942), ಬಸವಣ್ಣನವರ ದಿವ್ಯ ಜೀವನವನ್ನು ಹೇಳುವ ಮೂರಂಕಗಳ ನಾಟಕ. 'ಭಾರತ ವೀರ' (1963), ರಜತರೇಖೆ (1965), ನಿರ್ಬಂಧನ (1974) ಮತ್ತು ಭಗ್ನನೂಪುರ ಎಂಬ ನಾಟಕಗಳು ರಂಗದ ಮೇಲೆ ಬಹಳ ಯಶಸ್ವಿ ಪ್ರದರ್ಶನಗೊಂಡಿವೆ. ಕಾವ್ಯಾನಂದರು ಕವಿಯಾಗಿ ನಾಟಕದ ರಚನೆಗೆ ತೊಡಗಿದಾಗ ಅವರ ಕಲಾಪ್ರತಿಭೆ ಉಕ್ಕಂದವಾಗಿ ಹರಿಯುತ್ತದೆ ಎಂಬುದಕ್ಕೆ ಈ ನಾಟಕಗಳು ಸಾಕ್ಷಿಯಾಗಿವೆ.

ಸುಬೋಧಸಾರ(1939), ಶ್ರೀಕಾರ ಹಾಗೂ ಪ್ರಬಂಧಮಾಲೆ(1952), ಪದ್ಯರತ್ನಾಕರ (1956), ಮಹಾತ್ಮ ಕನಕದಾಸ ಪ್ರಶಸ್ತಿ (1965), ಸರಹದ್ ಗಾಂಧಿ (1967), ಶರಣಪ್ರಸಾದ (1969), ಮಣಿಹ(1985) ಮತ್ತು ಸಿದ್ಧಗಂಗಾ ಶ್ರೀ (1986) ಶ್ರೀಯುತರ ಸಂಪಾದಿತ ಗ್ರಂಥಗಳು.

ಶರಣ ಚರಿತಾಮೃತ(1964), ಬಸವಣ್ಣನವರ ಜೀವನ ಹಾಗೂ ಸಂದೇಶ (1977), ಮಹಾದೇವಿ, ಸಿದ್ಧರಾಮ (1974), ಹರ್ಡೇಕರ್ ಮಂಜಪ್ಪ (1978), ಮಿರ್ಜಾಗಾಲಿಬ್ (1979) ಮುಂತಾದವರ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ತ್ರಿಭುವನಮಲ್ಲ(1974) ಅವರ ಏಕೈಕ ಚಾರಿತ್ರಿಕ ಕಾದಂಬರಿ. ಕಥಾಮಂಜರಿ (1949), ಮತ್ತು ತುಷಾರಹಾರ (1956) ಅವರ ಕಥಾಸಂಗ್ರಹಗಳು. ಇವಲ್ಲದೆ ಅನೇಕ ರೇಡಿಯೋ ನಾಟಕಗಳನ್ನು ಬೇರೆ ಬೇರೆ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ.

ಕನ್ನಡದ ಜೊತೆಗೆ ಉರ್ದು, ಹಿಂದಿ, ಮರಾಠಿ, ಇಂಗ್ಲಿಷ್, ತೆಲುಗು, ಸಂಸ್ಕೃತ ಭಾಷೆಗಳನ್ನು ಬಲ್ಲ ಪುರಾಣಿಕರು ಉರ್ದು ಭಾಷೆಯಿಂದ ಸರ್ ಮೊಹಮದ್ ಇಕಬಾಲ್‌ರ ಕವಿತೆಗಳನ್ನು ಕನ್ನಡಕ್ಕೆ ತಂದುಕೊಟ್ಟಿದ್ದಾರೆ. ಹಲವು ಮುಷಾಯಿರಾ ಕವಿಗೋಷ್ಠಿಗಳ ಅಧ್ಯಕ್ಷರಾಗಿದ್ದಾರೆ. ಕನ್ನಡದ ಹಿರಿಮೆ ಗರಿಮೆಯನ್ನು ಕುರಿತು ಉರ್ದು ಭಾಷೆಯಲ್ಲಿ ಬರೆದು ಪರಿಚಯಿಸಿಯೂ ಇದ್ದಾರೆ.

"ಸಿದ್ಧಯ್ಯನವರ ಕೌಟುಂಬಿಕ ವಾತಾವಾರಣದಲ್ಲಿ ಮಹಾಕಾವ್ಯದ ಧ್ವನಿಗಳು ಅವರ ಬಾಲ್ಯದಿಂದಲೇ ದುಂದುಭಿಸುತ್ತಿದ್ದನು. ಪ್ರಾಯದ ಪ್ರಥಮ ಗ್ರಾಸದಲ್ಲಿಯೇ ಅವರು ಶರಣರ ಸಾಹಿತ್ಯವನ್ನು ಮುಕ್ಕಿದರು. ದೇಶ ಸೇವಾ ತತ್ಪರವಾದವರ ಸಂಘ ಸಹವಾಸಗಳಲ್ಲಿ ಕಾಲಕಳೆದರು.

ಕಾವ್ಯಾನಂದರ ಕಾವ್ಯರಚನೆಯ ಅಸ್ತಿಭಾರಕ್ಕೆ ತತ್ತ್ವಗಳ ತೊಕವಿರುವುದರಿಂದ ಅವರ ರಾಗದ ತ್ವೇಷದ ನುಡಿಗಳಲ್ಲಿ ಬೆಂಕಿಯ ಜೊತೆಗೆ ಬೆಳಕೂ ನಂಗ್ಗುತ್ತದೆ" ಎಂದು ದಿವಂಗತ ದ. ರಾ. ಬೇಂದ್ರೆಯವರು ಪುರಾಣಿಕರ 'ಜಲಪಾತ'ಕ್ಕೆ ಮುನ್ನುಡಿ ಬರೆಯುತ್ತ ಹೇಳಿರುವ ಮಾತುಗಳನ್ನು ಪುರಾಣಿಕರು ಅವರ ಜೀವನದಲ್ಲಿ ಸತ್ಯವಾಗಿಸಿದರು.



ಕನ್ನಡ ನಾಡು ನುಡಿಗೆ ಉತ್ಸಾಹದ ಚಿಲುಮೆಯಾಗಿ ದುಡಿದು ಕನ್ನಡ ಕಾವ್ಯಗಂಗೆಗೆ ತಮ್ಮ ಪಾಲಿನ ಉಪವಾಹಿನಿಯನ್ನು ಸೇರಿಸಿ 1945ರಲ್ಲಿ ಹರಪನಹಳ್ಳಿಯ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷರಾಗಿ, 1944ರಲ್ಲಿ ಕಲಬುರ್ಗಿಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ, 1955ರಲ್ಲಿ ಮೈಸೂರಿನ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಲೇಖಕರ ಗೋಷ್ಠಿಯ ಅಧ್ಯಕ್ಷರಾಗಿ, 1958ರಲ್ಲಿ ಬೀದರ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಕವಿಗೋಷ್ಠಿಯ ಅಧ್ಯಕ್ಷರಾಗಿ ಕನ್ನಡ ಸಾಹಿತ್ಯದ ತೇರನೆಳೆದಿರುವ ಕಾವ್ಯಾನಂದರನ್ನು ಕನ್ನಡ ಜನತೆ ಗೌರವಿಸಿ ತನ್ನನ್ನೇ ತಾನು ಗೌರವಿಸಿಕೊಂಡಿದೆ.

1978ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1980ರಲ್ಲಿ ಭಿಲ್ವಾರ ಪ್ರಶಸ್ತಿ, 1981ರಲ್ಲಿ ಮಾಳವಾಡ ಪ್ರಶಸ್ತಿ, 1983ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದು ಗೌರವಿಸಲ್ಪಟ್ಟರಲ್ಲದೆ 1987ರಲ್ಲಿ ನಡೆದ 58ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ.

ಕನ್ನಡದ ಹೊಂದೀವಿಗೆಯ ಹಚ್ಚಲಿನ್ನೊಮ್ಮೆ
ಬಸವ ವಿದ್ಯಾರಣ್ಯ ಹುಟ್ಟಿಬರಲಿ !
ಕನ್ನಡದ ವೈರಿಗಳ ಮೆಟ್ಟಿ ಕನ್ನಡ ನಾಡ
ಚಿನ್ನರನ್ನದ ಗುಡಿಯ ಕಟ್ಟಿಬರಲಿ !
ಕನ್ನಡದ ಬತ್ತಿಯೆಳೆಗಿಡಿದ ಮಂಕನು ತೆಗೆಯೆ
ನನ್ನ ಕಾಯವು ಚಾಚು-ಕಡ್ಡಿಯಾಗಿರಲಿ !
ಭಾರತದ ದೀವಳಿಗೆಯಲ್ಲಿ ಸಿವಗನ್ನಡದ
ಜ್ಯೋತಿಯಿದು ತೇಜಸ್ವಿಗೊಡ್ಡಿಯಾಗಿರಲಿ

ಎಂಬ ಹೇರಾಸೆಯಿಂದ ಶ್ರೀಯುತರು ಬೆಂಗಳೂರಿನಲ್ಲಿ ನಿವೃತ್ತ ಜೀವನ ಸಾಗಿಸುತ್ತಿದ್ದಾರೆ.